ಶ್ರೀ ಪ್ರಭುರಾಜ ಪಾಟೀಲ — ತಾವು ಸಭೆಯು ಮುಂದಿಟ್ಟಿರುವ ತಃಖ್ತೆಯಲ್ಲಿ ೧, ೨, ೧೩, ೧೫. ಈ ನಾಲ್ಕರಲ್ಲಿ ಒಂದನೆಯದರಲ್ಲಿ ೧೬ ಅರ್ಜಿಗಳನ್ನು, ಎರಡರಲ್ಲಿ ೧೩ ಅರ್ಜಿಗಳನ್ನು, ೧೩ರಲ್ಲಿ ೧೮ ಅರ್ಜಿಗಳನ್ನು ಮತ್ತು ೧೫ರಲ್ಲಿ ೨೮ ಅರ್ಜಿಗಳನ್ನು ಮೇಲಕ್ಕೆ ಕಳುಹಿಸಿಕೊಡಲಾಗಿದೆ. ಅದೇ ರೀತಿ ೩, ೭, ೯, ೧೦ ಸೀರಿಯಲ್ ನಂಬರಗಳಲ್ಲಿ ಏಳನೆಯ ಕಲಂನ್ನು ನೋಡಿದರೆ, ಅಲ್ಲಿ ೩೦, ೧೬, ೧೮, ೩೯ ಇಷ್ಟು ಅರ್ಜಿಗಳನ್ನು ತಡೆಹಿಡಿಯಲಾಗಿದೆ. ಕೆಲವೇ ಕಂಪನಿಗಳಿಂದ ಪಂಪಸೆಟ್ಟಗಳನ್ನು ತೆಗೆದುಕೊಂಡರೆ ಲೋನ್ ಕೊಡುತ್ತೇವೆ ಬೇರೆ ಕಂಪನಿಗಳ ಪಂಪಸೆಟ್ಸ ತೆಗೆದು ಕೊಂಡರೆ ಹಣ ನೀಡಲಾಗದೆಂದು ತಾರತಮ್ಯ ಮಾಡುವುದರ ಬಗ್ಗೆ ತಾವು ವಿಚಾರಿಸ ಬೇಕು ಎಂದು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಎ. ಶಂಕರ ಆಳ್ವ.— ಅದು ಸರಿಯಲ್ಲ, ಗವರ್ನಮೆಂಟಿನವರು ಒಂದು ಅಪ್ರೂವ್ಡ್ ಲಿಸ್ಟನ್ನು ಇಟ್ಟಿದ್ದೇವೆ. ಇದರಲ್ಲಿ ಹೆಚ್ಚು ಕಡಿಮೆ ಏನಾದರೂ ಆದರೆ ವಿಚಾರಿಸುತ್ತೇವೆ.

KALMANE BRIDGE ACROSS AGHANASHINI RIVER IN SIDDAPUR TALUK

147 Sri M. H. JAYAPRAKASH NARAYAN (Sirsi).— Will the Minister for Public Works and Electricity be pleased to state.—

(a) when the estimate for the construction of Kalmane bridge in Siddapur taluk across Aghanashini river has been prepared and sent to Government for sanction;

(b) when the same would be sanctioned and work commenced?

Sri H. M. CHANNABASAPPA (Minister for Public Works and Electricity).— (a) The estimate has not been prepared.

(b) This question does not arise in view of the reply furnished to clause (a) of the question.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.— ಈ ಸೇತುವೆಯ ನಿರ್ಮಾಣದಿಂದ ಹತ್ತಾರು ಸಾವಿರ ಜನ ಮತ್ತು ಜಾನುವಾರುಗಳಿಗೆ ತೊಂದರೆ ನಿವಾರಣೆಯಾಗುತ್ತದೆ ಅಲ್ಲದೆ ಕಳೆದ ಆರು ವರ್ಷಗಳಿಂದ ಈ ಸೇತುವೆಯನ್ನು ನಿರ್ಮಾಣ ಮಾಡಬೇಕು ಎಂದು ಹತ್ತಾರು ಪಂಚಾಯತಿಗಳು ರೆಸಲ್ಯೂಷನ್ ಮಾಡಿ ಸರ್ಕಾರಕ್ಕೆ ಮನವಿಯನ್ನೂ ಮಾಡಿವೆ. ಇದನ್ನು ಪರಿಶೀಲನೆ ಮಾಡಿ ವಿಚಾರ ಮಾಡಿಸುತ್ತೀರಾ?

†ಶ್ರೀ ಎಚ್. ಎಂ. ಚನ್ನಬಸಪ್ಪ.— ಸೇತುವೆಗಳ ಅವಶ್ಯಕತೆ ಇರತಕ್ಕ ಪ್ರದೇಶಗಳು ಬೇಕಾದಷ್ಟು ಇವೆ. ಇವುಗಳಲ್ಲಿ ಯಾವುದು ಮುಖ್ಯ, ಯಾವುದನ್ನು ಆಮೇಲೆ ತೆಗೆದುಕೊಳ್ಳಬಹುದು ಎಂದು ಇದೆ. ಈ ಸೇತುವೆಯನ್ನು ತೆಗೆದುಕೊಳ್ಳಕೂಡದು ಎನ್ನತಕ್ಕ ಪ್ರಶ್ನೆಯಲ್ಲ. ಇದು ರೂರಲ್ ಕಮ್ಯುನಿಕೇಷನ್‌ನಲ್ಲಿ ಇರತಕ್ಕದ್ದು; ಪಿ. ಡಬ್ಲ್ಯೂ. ಡಿ. ರಸ್ತೆಯಲ್ಲಿ ಇಲ್ಲ. ಇದಕ್ಕೆ ಸುಮಾರು ಎರಡು ಲಕ್ಷ ರೂಪಾಯಿಗಳ ಅಂದಾಜನ್ನು ಮಾಡಲಾಗಿದೆ. ಇದನ್ನು ಮುಂದೆ ರೂರಲ್ ಕಮ್ಯುನಿಕೇಷನ್‌ನೊಳಗೆ ತೆಗೆದುಕೊಳ್ಳಬೇಕಾಗಿ ಬರುತ್ತದೆ. ಸ್ವಲ್ಪ ಹಣ ಒದಗಿದ ಕಾಲದಲ್ಲಿ ಇದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.— ಕಲ್ಮನೆಯ ಸೇತುವೆ ಬ್ರಿಡ್ಜ್ ಒಗ್ಗೆ ಸಿಸಿಯ ಎಕ್ಸಿಕ್ಯುಟೀವ್ ಇಂಜನಿಯರನ್ನು ಕೇಳಿದಾಗ ಅವರು ಅದರ ಅಂದಾಜು ಮಾಡಿದ್ದೇನೆ, ಬಡ್ಜೆಟ್ಟಿನಲ್ಲಿ ಸೇರಿಸುವುದಕ್ಕೆ ಸರ್ಕಾರಕ್ಕೆ ಶಿಫಾರಸ್ ಮಾಡಿದ್ದೇವೆ ಎಂದು ಹೇಳಿದರು ಅದು ನಿಜವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಇದಕ್ಕೆ ಎರಡು ಲಕ್ಷ ರೂಪಾಯಿಗಳ ಅಂದಾಜು ಆಗಿದೆ. ಬಡ್ಜೆಟ್ಟಿನಲ್ಲಿ ಸೇರಿಸಿಲ್ಲ. ಹಣ ಇಲ್ಲದೆ ಇದ್ದುದರಿಂದ ಅದನ್ನು ಹಾಗೆಯೇ ಇಟ್ಟಿದ್ದೇನೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.— ನಾನು ಹತ್ತು ದಿವಸಗಳ ಹಿಂದೆ ಈ ಬಗ್ಗೆ ಚೀಫ್ ಇಂಜನಿಯರನ್ನು ನೋಡಿದೆ, ಅವರು ಹೇಳಿದರು, ಈಗ ಎಕಾನಮಿ ಮೆಷರ್ ಇರುವುದರಿಂದ ಇಂಥಾದ್ದೆಲ್ಲಾ ಕಟ್ ಆಗಿದೆ. ಬಡ್ಜೆಟ್ಟಿನಲ್ಲಿ ಸೇರಿಸಿ ಎಂದು ಶಿಫಾರಸ್ ಮಾಡಿದ್ದೇವೆ ಎಂದು ಹೇಳಿದರು. ಬಡ್ಜೆಟ್ಟಿನಲ್ಲಿ ಸೇರಿಸುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಅದು ಆಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. ಈಗ ಬಡ್ಜೆಟ್ ಆಗಿ ಹೋಗಿದೆ, ಹೊಸದಾಗಿ ಸೇರಿಸತಕ್ಕ ಪ್ರಶ್ನೆಯಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.— ಮುಂದಿನ ವರ್ಷ ಸೇರಿಸುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಆಗ ವಿಚಾರ ಮಾಡೋಣ.